# ಹಾರಿ ಮಿಂಚುವ ಕನಸು

ಗೋಪೀನಾಥ ರಾವ್

ಕನಸುಗಳನ್ನು ಹೊತ್ತು ಗಲ್ಫಿಗೆ ಉದ್ಯೋಗ ಅರಸಿಕೊಂಡು ಬಂದಿದ್ದ ದೀಪಕ್, ವಿಸಿಟ್ ವೀಸಾದ ಅವಧಿ ಮುಗಿಯುತ್ತಿದ್ದಂತೆ ಗಾಬರಿಗೊಳಗಾಗಿದ್ದ. ಕೆಲಸ ಸಿಗದೆ ವೀಸಾ ಮುಗಿದು ಬರಿಗೈಯಲ್ಲಿ ವಾಪಸು ಹೋಗುವ ದುಃಸ್ಥಿತಿ ನಿಚ್ಚಳವಾಗುತ್ತಿದ್ದಂತೆ ತನ್ನ ಸಿ.ವಿ.ಯನ್ನು ಪತ್ರಿಕೆಗಳಲ್ಲಿನ ಜಾಹೀರಾತಿನಲ್ಲಿರುವ ವೇಕೆನ್ಸಿಗೆ ಹೊಂದುವ ಹಾಗೆ ತಿರುಚಿ ಕಳುಹಿಸಿಕೊಡುವ ಸ್ಥಿತಿ ತಲುಪಿದ್ದ. ಹೀಗೆಯೇ 'ಗಿಡುಗ ಸಾಕಣೆಯಲ್ಲಿ ಮಾಹಿತಿ ಇರುವ ಸಹಾಯಕ ಬೇಕಾಗಿದ್ದಾನೆ' ಎಂಬ ಜಾಹೀರಾತಿಗೂ ಅರ್ಜಿ ಗುಜರಾಯಿಸಿದ್ದ. ಈ ಉದ್ಯೋಗಕ್ಕೆ ತನ್ನ ಅರ್ಹತೆ ಸಾಬೀತು ಪಡಿಸಲು ಸಿ.ವಿ.ಯಲ್ಲಿ 'ವಿಭಿನ್ನ ಜಾತಿಯ ಹಕ್ಕಿಗಳನ್ನು ಸಾಕುತ್ತಿದ್ದ ಫಾರ್ಮೊಂದರಲ್ಲಿ ಎರಡು ವರ್ಷ ಕೆಲಸ ಮಾಡಿದ್ದೇನೆ' ಎಂದು ಬೇರೆ ಸೇರಿಸಿದ್ದ. ಅರಬಿಯೊಬ್ಬ ದೀಪಕನನ್ನು ಫೋನಿನಲ್ಲಿ ಸಂಪರ್ಕಿಸಿದ. ದೇಶ, ಭಾಷೆ, ವಯಸ್ಸು, ವಿದ್ಯಾಭ್ಯಾಸ, ವೀಸಾ ಇತ್ಯಾದಿ ವಿವರಗಳನ್ನು ಕೇಳಿ ಖಚಿತ ಪಡಿಸಿಕೊಂಡು, ತನ್ನ ಮನೆವಿಳಾಸ ಕೊಟ್ಟು 'ನಾಳೆ ಬಾ, ಮಾತಾಡೋಣ' ಎಂದಿದ್ದ.

ನಡುಹರೆಯದ ಅರಬಿ. ಅರಬಿಗಳ ಟ್ರೇಡ್‌ಮಾರ್ಕ್ ಶುಭ್ರ ಬಿಳಿ ನಿಲುವಂಗಿ ಧರಿಸಿ ಹಜಾರದಲ್ಲಿ ಕೂತಿದ್ದ. ಮನೆಯಲ್ಲಿ ಒಬ್ಬನೇ ಇದ್ದ ಹಾಗಿತ್ತು. ಇಡೀ ಮನೆಯ ಮೇಲಿಂದ ಮಹಡಿಯ ಎತ್ತರದಲ್ಲಿ ಎದುರಿನ ಗೇಟಿನವರೆಗೂ ವಿಸ್ತಾರವಾಗಿ ಬಲೆ ಹಾಕಿ ಮುಚ್ಚಲಾಗಿತ್ತು. ಒಳಗೆ ಖರ್ಜೂರದ ಗಿಡಗಳೂ ಸೇರಿ ಹಲವಾರು ಮರಗಿಡಗಳು. ಅಲ್ಲಲ್ಲಿ ಹತ್ತಾರು ಮರದ ಸ್ಟಾಂಡುಗಳು. ಮೂಲೆಮೂಲೆಗಳಲ್ಲಿ ಸ್ಟಾಂಡುಗಳ ಮೇಲೆ ಕುಳಿತ ಐದಾರು ಗಿಡುಗಗಳು. ಅವುಗಳಿಗೆಲ್ಲ ಕಣ್ಣುಮುಚ್ಚುವ ಹಾಗೆ ಟೊಪ್ಪಿ ಹಾಕಿಡಲಾಗಿತ್ತು. ಒಂದುಕಾಲಿಗೆ ನೈಲಾನ್ ದಾರದಿಂದ ಸ್ಟಾಂಡಿಗೆ ಕಟ್ಟಿಹಾಕಲಾಗಿತ್ತು. ಅರಬಿ ಗಿಡುಗ ವ್ಯವಹಾರದಲ್ಲಿರುವವನೂ, ಈ ಗಿಡುಗಗಳ ಸಾಕಣೆಗೇ ತನ್ನನ್ನು ನಿಯೋಜಿಸುತ್ತಿದ್ದಾನೆ ಎನ್ನುವುದೂ ದೀಪಕನಿಗೆ ಸ್ಪಷ್ಟವಾಯಿತು. ಮುಖದಲ್ಲಿ ನಗುವೇ ಇಲ್ಲದ ಮನುಷ್ಯ. ದೀಪಕನನ್ನು ನೋಡಿಯೂ ನೋಡದವನಂತೆ ಕುಳಿತಿದ್ದ. ದೀಪಕನೇ 'ಸಲಾಂ ಅರಬಾಬ್, ಐ ಅಮ್ ದೀಪಕ್' ಎಂದು ಪರಿಚಯ ಮಾಡಿಕೊಂಡ. ಆತ ಅರಬಿ ಭಾಷೆಯಲ್ಲಿ ಪ್ರಶ್ನೆ

